# ದೇಶ ಮತ್ತು ಧರ್ಮ

ರಾಮಾಯಣ ಮಹಾಕಾವ್ಯದ ಅಂತ್ಯದಲ್ಲಿ ಶ್ರೀರಾಮಚಂದ್ರನು ವಿಭೀಷಣನನ್ನು ರಾಜನನ್ನಾಗಿ ಪಟ್ಟಾಭಿಷೇಕ ಮಾಡುತ್ತಾನೆ. ಆ ಸಂದರ್ಭದಲ್ಲಿ ಅತ್ಯಂತ ಸಂಪದ್ಭರಿತವಾಗಿರುವ ಲಂಕೆಯಲ್ಲೇ ಶ್ರೀರಾಮನು–ಸೀತಾ,ಲಕ್ಷ್ಮಣರೊಡನೆ ಇರಬೇಕೆಂಬ ಮಾತು ಪ್ರಸ್ತಾಪಕ್ಕೆ ಬರುತ್ತದೆ. ಆಗ ಶ್ರೀರಾಮನು ತಾಯಿ ಮತ್ತು ತಾಯ್ನೆಲ ನಮಗೆ ಪವಿತ್ರವಾದವು. ನಮ್ಮ ಗಮ್ಯ ಮತ್ತು ಗುರಿ ಅವೇ ಆಗಿರಬೇಕು. ಅಲ್ಲೇ ನಮ್ಮ ಜನ್ಮಕ್ಕೆ ಅರ್ಥಪ್ರಾಪ್ತಿ ಆಗುವಂಥದ್ದು ಎಂಬ ಮಾತುಗಳನ್ನಾಡಿ ಲಂಕೆಯಲ್ಲಿರಲು ನಿರಾಕರಿಸಿ ಸೀತಾ,ಲಕ್ಷ್ಮಣರೊಡನೆ ಅಯೋಧ್ಯೆಗೆ ಮರಳುತ್ತಾನೆ.

ಈ ಪ್ರಸಂಗ ನಮ್ಮ ತಾಯ್ನೆಲವೆಂಬುದು ಸರ್ವ ಸಂಗತಿಗಳಿಗಿಂತಲೂ ಶ್ರೇಷ್ಠವಾದುದು ಎಂಬುದನ್ನು ಪ್ರತಿಪಾದಿಸುತ್ತದೆ. ಅಲ್ಲೇ ನಮ್ಮ ಬಾಳಿನ ಅರ್ಥವಿದೆ; ಅದರ ಮೇಲಿನ ಪ್ರೀತಿಯು ಮಾತೃ ಸದೃಶವಾದುದಾಗಿದೆ. ಅದರ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ನಾವು ದುಡಿಯಬೇಕಾಗಿದೆ ಎಂಬ ಸತ್ಯವನ್ನು ಬಹಿರಂಗಪಡಿಸುತ್ತದೆ. ನಾವು ಜಗತ್ತಿನ ಯಾವುದೇ ಮೂಲೆಯಲ್ಲಿದ್ದರೂ ನಮ್ಮ ಅಂತಿಮ ಗಮ್ಯ ನಮ್ಮ ತಾಯ್ನೆಲವೇ ಆಗಿರಬೇಕೆಂಬ ಚಿರ ತತ್ವವನ್ನು ರಾಮಾಯಣ ನಮ್ಮ ಅರಿವಿಗೆ ಮೂಡಿಸುತ್ತದೆ. ರಾಮಾಯಣದ ಈ ತತ್ವವೇ ಶತಶತಮಾನಗಳಿಂದ ನಿಶ್ಯಬ್ದವಾಗಿ ನಮ್ಮ ಸಾಹಿತ್ಯದಲ್ಲಿ ಹರಿದು ಬರುತ್ತಿದೆ. ಅದು ಪರಂಪರೆಯನ್ನು ಮುಂದುವರಿಸುವ ಶುಷ್ಕ ಮಾರ್ಗವಾಗಿರದೆ, ಬದುಕಿನ ಚಿರ ಮೌಲ್ಯಗಳಲ್ಲಿ ಪ್ರಮುಖವಾಗಿರುವುದರಿಂದ ಅದು ವರ್ತಮಾನಕ್ಕೆ ಬೇಕಾಗಿರುವ ಅಗತ್ಯ ದಾರಿದೀಪವಾಗಿದೆ. ಗ್ರಾಮೀಣ ಬದುಕನ್ನು ನಿರಾಕರಿಸುತ್ತಾ, ನಾಗರಿಕತೆಯ ಕೃತಕ ಆಡಂಬರಕ್ಕೆ, ತಾತ್ಕಾಲಿಕ ಆಕರ್ಷಣೆಗೆ ಒಳಗಾಗುತ್ತಿರುವ ತರುಣ ಜನಾಂಗಕ್ಕೆ ಅಗತ್ಯವಾಗಿ ಬರಬೇಕಾದ ತಿಳಿವಳಿಕೆಯಿದು. ಈ ರಾಮಾಯಣದ ಚಿರ ಮೌಲ್ಯವನ್ನೇ ಬೇರೆ ಬೇರೆ ಸ್ವರೂಪಗಳಲ್ಲಿ ನಮ್ಮ ಕುವೆಂಪು, ಕಾರಂತರು ನಿರೂಪಿಸಿದ್ದಾರೆ. ಕಾರಂತರ 'ಮರಳಿ ಮಣ್ಣಿಗೆ' ಮತ್ತು 'ಚಿಗುರಿದ ಕನಸು' ಕಾದಂಬರಿಗಳು, ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಕೃತಿ ಈ ತತ್ವವನ್ನು ಸಮರ್ಪಕವಾಗಿ ಮಂಡಿಸುತ್ತವೆ. 'ಬಂಗಾರದ ಮನುಷ್ಯ'ದಂಥ ಚಲನಚಿತ್ರವಂತೂ ಈ ತತ್ವವನ್ನು ಪರಿಣಾಮಕಾರಿಯಾಗಿ ಪ್ರತಿಫಲಿಸುತ್ತದೆ.

ದೇಶಕ್ಕೆ ಒಂದು ಸೀಮೆ ಇರುತ್ತದೆ. ಆ ಸೀಮೆಗೆ ವಿಶಿಷ್ಟವಾದ ಭಾಷೆ, ಆಹಾರ ಪದ್ಧತಿ, ಹವಾಮಾನ, ಜೀವನ ಶೈಲಿ ಇರುತ್ತವೆ. ಇವುಗಳ ಆಧಾರದ ಮೇಲೆ ಅಲ್ಲಿಗೇ ವಿಶಿಷ್ಟವಾದ ಸಂಸ್ಕೃತಿ ಮೂಡಿರುತ್ತದೆ. ಈ ಸಂಸ್ಕೃತಿಯ ಅಂಗವಾಗಿ ಧಾರ್ಮಿಕ ಪರಿಕಲ್ಪನೆಯೂ ಮೂಡಿರುತ್ತದೆ. ಅಂದರೆ ಒಂದು ದೇಶದ ಸಮಗ್ರ ಸಂಸ್ಕೃತಿಯ ಅವಿಭಾಜ್ಯ ಅಭಿನ್ನ ಉತ್ಪನ್ನವೇ ಧರ್ಮ. ಆದುದರಿಂದಲೇ ಅದು ತಾನು ಜನಿಸಿದ ದೇಶದ ಸೀಮೆಯ ಆಚಾರ ಭಾಗ ಮಾತ್ರವಾಗಿರಬೇಕಾಗುತ್ತದೆ, ಭಾಷೆಯ ಸ್ವರೂಪದಂತೆ. ಅದು ಬೇರೊಂದು ಸೀಮೆಯ ಸಂಸ್ಕೃತಿಯ ಮೇಲೆ ಆಕ್ರಮಣ ಮಾಡ ಹೊರಡುವುದು ಅಕ್ಷಮ್ಯವೂ, ಅತಿ ಕ್ರೂರವೂ ಆಗಿ, ಮತ್ತೊಂದು ಸಂಸ್ಕೃತಿಯನ್ನು ಗುಲಾಮನನ್ನಾಗಿಸಿಕೊಳ್ಳಲು ಹೊರಟ ದುಷ್ಕೃತ್ಯ ಮಾದರಿಯಾದುದಾಗುತ್ತದೆ.

ಆದರೆ ಇಂದು ಧರ್ಮ ಸೀಮೆಯನ್ನು ದಾಟುವ ಕೆಲಸವನ್ನು ಜಾಗತಿಕ ಮಟ್ಟದಲ್ಲಿ ನಡೆಸುತ್ತಿದೆ. ಈ ಕಾರಣದಿಂದಾಗಿಯೇ ಧರ್ಮಕ್ಕೆ ಸೀಮೆಯ ಹಂಗಿಲ್ಲ. ಅದನ್ನು ದಾಟಿ ಧಾರ್ಮಿಕ ಸಾಮ್ರಾಜ್ಯವನ್ನು ಸ್ಥಾಪಿಸುವುದೇ ಮುಖ್ಯವೆಂದು ಪ್ರಬಲ ಜನಸಂಖ್ಯೆಯ ಬಾಹುಳ್ಯವಿರುವ ಧರ್ಮಗಳು ಹೇಳುತ್ತಿವೆ. ಈ ನಿಟ್ಟಿನಲ್ಲಿ ಜಗತ್ತಿನಲ್ಲಿ ಧರ್ಮಯುದ್ಧಗಳು ನಡೆದಿವೆ, ನಡೆಯುತ್ತಿವೆ. ಈ ಧರ್ಮಮೂಲ ಸಿದ್ಧಾಂತವು ವ್ಯಕ್ತಿಯನ್ನು ದೇಶ ಮೂಲವಾದಿತನದಿಂದ ಧರ್ಮ ಮೂಲಭೂತವಾದಿಯನ್ನಾಗಿ ಪರಿವರ್ತಿಸುತ್ತದೆ. ಅವನಿಗೆ ದೇಶಕ್ಕಿಂತ ಧರ್ಮವೇ ಪ್ರಧಾನವಾಗಿ, ದೇಶದ್ರೋಹದಂಥ ಕೆಲಸ ಮಾಡಲು ಹೇಸಿಗೆ ಅನ್ನಿಸುವುದಿಲ್ಲ. ಧಾರ್ಮಿಕ ಮೂಲಭೂತವಾದಿಗಳಿಗೆ ತನ್ನ ಸೀಮೆ, ಅದರ ಭಾಷೆ ಮತ್ತು ಅಲ್ಲಿನ ಬದುಕು ಮುಖ್ಯವಾಗುವುದೇ ಇಲ್ಲ. ಮಾನವೀಯ ಮೌಲ್ಯಗಳಿಗಿಂತ ನಂಬಿಕೆಯ ಆಧಾರದ ಮೇಲೆ ಮೂಡಿದ ಧಾರ್ಮಿಕ ಆಚರಣೆಗಳು ಮುಖ್ಯವಾಗುತ್ತವೆ. ತನ್ನ ಧರ್ಮವೇ ಶ್ರೇಷ್ಠವೆಂಬ ಅಹಂಕಾರದಿಂದ ಜಗತ್ತನ್ನು ಅದರ ಬಹುರೂಪಕತೆಯಿಂದ ಧಾರ್ಮಿಕ ಏಕರೂಪಕತೆಗೆ ಪರಿವರ್ತಿಸುವ ಕೆಲಸವನ್ನು ಮೂಲಭೂತವಾದ ಯತ್ನಿಸುತ್ತದೆ. ಅದಕ್ಕಾಗಿ ಅಮಾನವೀಯ ಕೃತ್ಯಗಳನ್ನು ಎಸಗಿ, ಅದಕ್ಕೆ ಧರ್ಮದ ಮುಖವಾಡ ಧರಿಸಿ ನಗುತ್ತದೆ. ಅದಕ್ಕೆ 'ಧರ್ಮವನ್ನು ರಕ್ಷಿಸಿದವನಿಗೆ' ಧರ್ಮ ರಕ್ಷಣೆ ನೀಡುತ್ತದೆ' ಎಂಬ ಹುಸಿ ಸಿದ್ಧಾಂತದ ಲೇಪನ ಹಚ್ಚಲಾಗುತ್ತದೆ.

ಪ್ರತಿಯೊಬ್ಬನಿಗೂ ಆತ ಹುಟ್ಟಿದ ನೆಲ, ಧರ್ಮಕ್ಕಿಂತಲೂ ಶ್ರೇಷ್ಠವಾದುದೆಂಬ ಅರಿವು ಮೂಡಬೇಕು. ಧರ್ಮವೆಂಬುದು ಆ ನೆಲದ ಸಂಸ್ಕೃತಿಯ ಒಂದಂಶವೇ ಹೊರತು, ಅದೇ ಎಲ್ಲವೂ ಅಲ್ಲವೆಂಬ ತಿಳಿವಳಿಕೆ ಬರಬೇಕು. ಆಗ ಮಾತ್ರ ದೇಶದ ಸಮಗ್ರತೆ ಸೋದರತ್ವದ ಮೂಲಕ ಅರಳಲು ಸಾಧ್ಯ.

■ **ಶಿಕಾಕು**

## ಮಾತೇ ಮುತ್ತು

★ 'ತಾಯಿಯೊಂದೇ ಸತ್ಯ, ತಂದೆ ಅವರವರ ನಂಬಿಕೆ' ಎಂಬ ಪ್ರತೀತಿ ಇದೆ. ಸಮಾಜದ ಯಾವುದೇ ವರ್ಗಕ್ಕೂ ಇದು ಅನ್ವಯಿಸಬಹುದು. ಅಂದಮೇಲೆ ಮಹಿಳೆ ಅಥವಾ ಬಡವರ ಹುಟ್ಟು ಹಾಗೂ ಜಾತಿಯ ಕುರಿತು ಯಾರೇ ಲಘುವಾಗಿ ಮಾತನಾಡಿದರೂ, ಅದು ಅವರ ಪುರುಷಾಹಂಕಾರದ ಅನಾಗರಿಕತನ.

–ಅನುಭವಾಮೃತ

★ ಬುದ್ಧಿವಂತನು ಕಾವ್ಯ, ನಾಟಕ, ಕಲೆ, ವಿನೋದಗಳಲ್ಲಿ ಸಮಯ ಕಳೆದರೆ; ಮೂರ್ಖನು ವ್ಯಸನ, ನಿದ್ದೆ ಹಾಗೂ ಜಗಳಗಳಲ್ಲಿ ಕಾಲ ಕಳೆಯುತ್ತಾನೆ.

–ಪ್ಲೇಟೋ

★ ಹೇಳಿದಂತೆ ನಡೆಯುವವನ ಸುಭಾಷಿತ ಸ್ವೀಕರಿಸಲು ಯೋಗ್ಯವಾದದ್ದು.

–ಧಮ್ಮಪದ

★ ತನಗೆ ತಾನೇ ಉಪದೇಶ ಹೇಳಿಕೊಳ್ಳುವವನು ಉನ್ನತಿ ಸಾಧಿಸಬಲ್ಲ.

–ಸ್ವಾಮಿ ರಾಮತೀರ್ಥ

★ ಪ್ರತಿಯೊಬ್ಬರೂ ತಮ್ಮ ಉನ್ನತಿಯ ಬಗ್ಗೆ ಸಂತೃಪ್ತರಾಗಿರಬೇಕು. ಆದರೆ ಎಲ್ಲರ ಉನ್ನತಿಯಲ್ಲಿಯೇ ನಮ್ಮ ಉನ್ನತಿ ಎಂದು ತಿಳಿಯಬೇಕು.

–ದಯಾನಂದ ಸರಸ್ವತಿ

★ ಯಾವುದನ್ನು ಮಾಡಲು ನಮಗೆ ಸಾಧ್ಯವಿಲ್ಲವೋ, ಅಂಥದನ್ನು ನಾಶಪಡಿಸುವ ಅಧಿಕಾರ ನಮಗಿರುವುದಿಲ್ಲ.

–ಮಹಾತ್ಮ ಗಾಂಧೀಜಿ

★ ಜೀವನದಲ್ಲಿ ಬುದ್ಧಿವಂತಿಕೆಯ ಮಾತೆಂದರೆ ಅದು ಏಕಾಗ್ರತೆ. ಶಕ್ತಿ ಚದುರಿದರೆ ಅದು ಕೆಟ್ಟದು.

–ಎಮರ್ಸನ್

★ ನಿಮ್ಮ ಬದುಕಿನ ಘಟನೆಗಳನ್ನು ನೀವು ನೋಡುವ ದೃಷ್ಟಿಕೋನ, ಸ್ವೀಕರಿಸುವ ರೀತಿ– ನಿಮ್ಮ ಯಶಸ್ಸು ಮತ್ತು ಸುಖವನ್ನು ನಿರ್ಧರಿಸುತ್ತದೆ.

–ಬಸವರಾಜ ಕಟ್ಟೀಮನಿ

★ ಕೊಟ್ಟು ಕೆಟ್ಟವರಿಲ್ಲ, ತಿಂದು ಬದುಕಿದವರಿಲ್ಲ. ಕೊಟ್ಟು ಕದಿಯಲು ಬೇಡ, ಕೊಟ್ಟಾಡಿಕೊಳಬೇಡ.

–ಸರ್ವಜ್ಞ

★ ಪ್ರಕೃತಿ ನೀಡಿದ್ದನ್ನು ಮಾತ್ರ ಸ್ವೀಕರಿಸುತ್ತದೆ, ಜೀವಿಸುತ್ತದೆ. ಆದರೆ ಜಗತ್ತಿನ ಜನರು ವಿಶ್ವದಲ್ಲಿ ಪ್ರಕೃತಿಯನ್ನು ತಮ್ಮ ಸ್ವಾರ್ಥಕ್ಕೆ ಕೆಡಿಸಿ ಲಾಭ ಪಡೆಯಲು ಯೋಚಿಸುತ್ತಾರೆ.

–ಅಜ್ಞಾತ

★ ನಿಮ್ಮ ಬಗ್ಗೆ ನಿಮಗೆ ಅಪಾರ ನಂಬಿಕೆ, ದೃಢ ವಿಶ್ವಾಸವಿರಲಿ. ನೀವು ಏನು ಮಾಡಬೇಕೆಂದಿದ್ದೀರೋ ಅದಕ್ಕಿಂತ ಹೆಚ್ಚಿನದು ನಿಮಗೆ ತಿಳಿದಿದೆ.

–ಬೆಂಜಮಿನ್ ಸ್ಪೋಕ್

★ ಆಸಕ್ತಿಯೆಂಬ ಮದ್ಯವನ್ನು ಹೀರಿ, ಮಾಯೆಯೆಂಬ ಔಷಧವನ್ನು ನಾನು ಸೇವಿಸುತ್ತೇನೆ. ಇದರಿಂದ ನನ್ನ ಉತ್ಸಾಹ ಎಂದಿಗೂ ಕಮ್ಮಿಯಾಗುವುದಿಲ್ಲ.

–ಎಚ್.ಜಿ.ವೆಲ್ಸ್